**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಕೆ.ಆರ್.ನಗರ**

**ಸಿಸಿ.ನಂ. 346/2025**

| | | |
|---|---|---|
| ಸಾಕ್ಷಿಯ ಹೆಸರು | ಕೃಷ್ಣಮೂರ್ತಿ ಹೆಚ್ ಡಿ | ಡಿ.ಡಬ್ಲ್ಯೂ 1 |
| ತಂದೆಯ ಹೆಸರು | ದ್ಯಾವಯ್ಯ | |
| ವಯಸ್ಸು | 34 ವರ್ಷ | |
| ಉದ್ಯೋಗ | ಆಸ್ಪತ್ರೆಯಲ್ಲಿ ಕೆಲಸ | |
| ವಾಸ ಸ್ಥಳ | ಮೈಸೂರು | |

ದಿನಾಂಕಃ **24-02-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1) ನಾನು ಸುಮಾರು 7 ವರ್ಷಗಳಿಂದ ವಿವಿಧ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದು, ನನಗೆ ಮಾಸಿಕ ವೇತನ ಸರಾಸರಿ ರೂ. 30 ರಿಂದ 35 ಸಾವಿರ ಬರುತ್ತದೆ. ದೂರುದಾರರು ನನಗೆ 2022 ರಿಂದ 2024 ರವರೆಗೆ ಪರಿಚಯ ಇರುತ್ತಾರೆ. ನಾನು ದೂರುದಾರರ ಮನೆಯಲ್ಲಿ 2022 ರಿಂದ 2024 ರವರೆಗೆ ಬಾಡಿಗೆದಾರನಾಗಿರುತ್ತೇನೆ. 2024 ಮಾರ್ಚ ಮಾಹೆಯಲ್ಲಿ ನಾನು ಹೆಚ್ ಡಿ ಕೋಟೆಯಲ್ಲಿ ವರ್ಗಾವಣೆ ಆಗಿರುತ್ತೇನೆ. ಆ ಸಮಯದಲ್ಲಿ ನಾನು ದೂರುದಾರರ ಮನೆಯನ್ನು ಖಾಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಸಹಿ ಮಾಡಿದ ಆರು ಚೆಕ್ಕುಗಳು ಮನೆಯಲ್ಲಿ ಬಿಟ್ಟು ಹೋಗಿರುತ್ತೇನೆ. ದೂರುದಾರರರು ತಿಳುವಳಿಕೆ ಪತ್ರ ಕಳುಹಿಸಿದ ನಂತರ ನನಗೆಸೇರಿದ ಚೆಕ್ಕುಗಳು ಕಳೆದುಹೋಗಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. ತಂ ನಂತರ ನಾನು ವಕೀಲರ ಮೂಲಕ ದೂರುದಾರರಿಗೆ ಪ್ರತ್ಯುತ್ತರ ನೀಡಿರುತ್ತೇನೆ. ನಾನು ಮತ್ತು ಹೆಂಡತಿ ಕೆಲಸದಲ್ಲಿ ಇರುವುದರಿಂದ ನನಗೆ ಮತ್ತು ನನ್ನ ಹೆಂಡತಿಗೆ ಮಾಸಿಕ ವೇತನ ರೂ. 50,000/- ಬರುತ್ತದೆ. ನಾನು ದೂರುದಾರರಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ. ಆದ್ದರಿಂದ ನನ್ನನ್ನು ಪ್ರಕರಣದಿಂದ ಬಿಡುಗಡೆಗೊಳಿಸಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಸಿಸಿ.ನಂ. 346/2025

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.